**ಪಿ ಡಬ್ಲ್ಯೂಃ1**

ದಿನಾಂಕ 05-07-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್ ಎಸ್ ಎಸ್ ವಕೀಲರಿಂದಃ-**

ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಈ ಕೆಳಕಂಡಂತೆ ದಾಖಲೆಗಳನ್ನು ಹಾಜರಪಡಿಸುತ್ತಿದ್ದೇನೆ.

ದಾವಾ ಸ್ವತ್ತಿಗೆ ಸಂಬಂಧಿಸಿದ ದಿಃ 08-10-2020ರ ಉತಾರನ್ನು **ನಿಪಿ-1** ಎಂದು, ದಿಃ 28-02-1961 ರಿಂದ 2015ರ ವರೆಗಿನ ಉತಾರಿನ ದೃಢೀಕೃತ ನಕಲನ್ನು **ನಿಪಿ-2** ಎಂದು, ದಿಃ 28-02-1961 ರಿಂದ 2021ರ ವರೆಗಿನ ಸಂಪೂರ್ಣ ಉತಾರಿನ ದೃಢೀಕೃತ ನಕಲನ್ನು **ನಿಪಿ-3** ಎಂದು, ದಿಃ 17-07-2021 ರಂದು ಪ್ರತಿವಾದಿಗೆ ನೀಡಿದ ಮನವಿಯ ಸ್ವೀಕೃತಿ ನಕಲನ್ನು **ನಿಪಿ-4** ಎಂದು, ಎರಡು ಪೋಟೋ ಹಾಗೂ ಒಂದು ಸಿಡಿಯನ್ನು **ನಿಪಿ-5** ರಿಂದ **ನಿಪಿ-7** ಎಂದು, ಎರಡು ಪೋಟೋ ಹಾಗೂ ಒಂದು ಸಿಡಿಯನ್ನು **ನಿಪಿ-8** ರಿಂದ **ನಿಪಿ-10** ಎಂದು, ನಾಲ್ಕು ಪೋಟೋ ಹಾಗೂ ಒಂದು ಸಿಡಿಯನ್ನು **ನಿಪಿ-11** ರಿಂದ **ನಿಪಿ-15** ಎಂದು ಗುರುತಿಸಲಾಯಿತು.

**ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ/-

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.

ದಿನಾಂಕ 25-06-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ದಾವಾ ಆಸ್ತಿಯ ಪಶ್ಚಿಮಕ್ಕೆ ಮತ್ತು ಪ್ರತಿವಾದಿಯ ಆಸ್ತಿಯ ಪೂರ್ವಕ್ಕೆ ಒಂದು ಗೋಡೆ ಇತ್ತು ಎಂದರೆ ಸಾಕ್ಷಿಯ ಅದನ್ನು ಪ್ರತಿವಾದಿ ಕೆಡವಿರುವುದಾಗಿ ನುಡಿಯುತ್ತಾರೆ. ದಾವಾ ಆಸ್ತಿ ಮತ್ತು ಪ್ರತಿವಾದಿಯ ಆಸ್ತಿ ಮೂಲತಃ ನಮ್ಮ ಮನೆತನದ ಆಸ್ತಿಯಾಗಿತ್ತು ಎಂದರೆ ಸರಿ. ಪ್ರತಿವಾದಿಯ ಅಜ್ಜ ಪ್ರತಿವಾದಿಯ ಆಸ್ತಿಯನ್ನು ನನ್ನ ಚಿಕ್ಕಪ್ಪನಿಂದ ಖರೀದಿಸಿರುತ್ತಾರೆ ಎಂದರೆ ಸರಿ. ಅಂದಿನಿಂದ ಸದರಿ ಆಸ್ತಿಯಲ್ಲಿ ಪ್ರತಿವಾದಿ ಕಬ್ಜಾದಲ್ಲಿರುತ್ತಾನೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವಕ್ಕೆ ಇರುವ ಗೋಡೆಯೂ ಸಹ ಬಿದ್ದಿರುತ್ತದೆ ಎಂದರೆ ಸರಿ. ಪ್ರತಿವಾದಿಯು ದಾವಾ ಆಸ್ತಿಯ ಪೂರ್ವಕ್ಕೆ ಗೋಡೆ ಕಟ್ಟಬಾರದು ಎಂದು 1 ನೇ ಅರ್ಜಿಯನ್ನು ದಾಖಲಿಸಿದ್ದರು ಎಂದರೆ ಸರಿ.

2. ವಾದ ಪತ್ರದ ಜೊತೆ ಹಾಜರುಪಡಿಸಿದ ಹಾತ್ ನಕಾಶೆ ಸುಳ್ಳಿನಿಂದ ಕೂಡಿದ್ದು ನಮ್ಮ ಅನುಕೂಲಕ್ಕೆ ತಕ್ಕಂತೆ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ತೋರಿಸಿರುವ ವ್ಯಾಜ್ಯ ಕಾರಣವನ್ನು ನಾನೇ ಹೇಳಿ ಬರೆಸಿರುತ್ತೇನೆ. ಪ್ರತಿವಾದಿಯು ಕಟ್ಟುತ್ತಿರುವ ಗೋಡೆಯ ಜಾಗಕ್ಕೂ ಮತ್ತು ನಮಗೂ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಹೂಡುವ ಸಮಯದಲ್ಲಿ ಪ್ರತಿವಾದಿಯು ಅತಿಕ್ರಮಣ ಮಾಡಿ ಗೋಡೆ ಕಟ್ಟುತ್ತಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರಲಿಲ್ಲ ಎಂದರೆ ಸರಿಯಲ್ಲ. ಕೇವಲ ನಮ್ಮ ಕಾಲ್ಪನಿಕ ಕಾರಣದಿಂದ ಈ ದಾವೆಯನ್ನು ಹೂಡಿದ್ದು ಸತ್ಯದಿಂದ ಕೂಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಬಳಿ ಯಾವುದೇ ದಾಖಲೆಗಳು ಇಲ್ಲದ ಕಾರಣ ನ್ಯಾಯಾಲಯದಿಂದ ಕಮಿಶನರ್ ನೇಮಕಗೊಳಿಸಿಕೊಂಡಿದ್ದೆವು ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಿರುವುದಿಲ್ಲ. ಪ್ರತಿವಾದಿಯು ಯಾವುದೇ ಅತಿಕ್ರಮಣ ಮಾಡಿರುವುದಿಲ್ಲ ಎಂದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ.

3. ದಾವಾ ಹಾತ್ ನಕಾಶೆಯಲ್ಲಿ ತೋರಿಸಿರುವ ಐ ಜೆ ಆಸ್ತಿಯು ನಮ್ಮ ಮಾಲೀಕತ್ವಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಇದ್ದ ಗೋಡೆಯು ನಮ್ಮ ಮತ್ತು ಪ್ರತಿವಾದಿಯ ಆಸ್ತಿಯ ಕಾಮನ್ ವಾಲ್ ಆಗಿತ್ತು ಎಂದರೆ ಸರಿ. ಸದರಿ ಗೋಡೆ 16 ಇಂಚು ಅಗಲ ಇತ್ತು ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಿರುವುದಿಲ್ಲ. ಪ್ರತಿವಾದಿಯು ಈಗ ಕೇವಲ 6 ಇಂಚು ಅಗಲದ ಗೋಡೆ ಕಟ್ಟುತ್ತಿದ್ದಾನೆ ಎಂದರೆ ಸರಿಯಲ್ಲ. ನಿಪಿ 14 ರ

ಫೋಟೋದಲ್ಲಿ ಕಾಣಿಸುವ ನಿರ್ಮಾಣ ಹಂತದಲ್ಲಿರುವ ಮನೆಯ ಬಲಭಾಗದ ಆಸ್ತಿ ದಾವಾ ಆಸ್ತಿಯಾಗಿರುತ್ತದೆ ಎಂದರೆ ಸರಿ. ಸದರಿ ಫೋಟೋದಲ್ಲಿ ಕಾಣಿಸುತ್ತಿರುವ ಬಿದ್ದಿರುವ ಗೋಡೆಯು ದಾವಾ ಆಸ್ತಿ ಮತ್ತು ಪ್ರತಿವಾದಿ ಆಸ್ತಿಯ ನಡುವಿನ ಹಳೆಯ ಗೋಡೆಯಾಗಿರುತ್ತದೆ ಎಂದರೆ ಸರಿ. ಸದರಿ ಬಿದ್ದಿರುವ ಗೋಡೆಯನ್ನು ದಾಟಿ ಯಾವುದೇ ಅತಿಕ್ರಮಣ ಮಾಡಿ ಗೋಡೆ ಕಟ್ಟುತ್ತಿಲ್ಲ ಎಂದರೆ ಸರಿ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

ದಿನಾಂಕ 09-07-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾವು 1 ನೇ ಅರ್ಜಿಯಲ್ಲಿ ಯಾವುದೇ ಆದೇಶ ಪಡೆಯದ ಕಾರಣ ಈ ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಈಗ ಕಟ್ಟಡ ಕಟ್ಟಿ ಮುಗಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಅಕ್ರಮವಾಗಿ ಕಟ್ಟಿಕೊಂಡಿರುವುದಾಗಿ ನುಡಿಯುತ್ತಾರೆ. ಪ್ರತಿವಾದಿಯು ಸದರಿ ಕಟ್ಟಡವನ್ನು ಸಾಕಷ್ಟು ಹಣ ಖರ್ಚು ಮಾಡಿ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

ಡಿ ಡಬ್ಲ್ಯೂಃ 1

ದಿನಾಂಕ 17-12-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಹಾಜರುಪಡಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| ಕ್ರ.ಸಂ. | ನಿಶಾನೆ | ದಾಖಲಾತಿಗಳು |
|---|---|---|
| 1 | ನಿಡಿ 1 | ದಿನಾಂಕ 09-12-1985 ರ ಖರೀದಿ ಪತ್ರದ ಧೃಢೀಕೃತ ಪ್ರತಿ |
| 2 | ನಿಡಿ 2 | ಕಟ್ಟಡ ಪರವಾನಗಿಯ ಡಿಜಿಟಲ್ ಪ್ರತಿ ರುಜುವಾತುಪಡಿಸುವ ಹೊಣೆಗಾರಿಕೆಗೆ ಒಳಪಟ್ಟು ಗುರುತಿಸಲಾಯಿತು. |
| 3 | ನಿಡಿ 3 | ಕಟ್ಟಡ ನಕಾಶೆಯ ಡಿಜಿಟಲ್ ಪ್ರತಿ ರುಜುವಾತುಪಡಿಸುವ ಹೊಣೆಗಾರಿಕೆಗೆ ಒಳಪಟ್ಟು ಗುರುತಿಸಲಾಯಿತು. |
| 4 | ನಿಡಿ 4 | ನಮೂನೆ-3 ರ ಧೃಢೀಕೃತ ಪ್ರತಿ |
| 5 | ನಿಡಿ 5 | ಪೋಟೋ ಕಲಂ 65 ಬಿ ಅಡಿ ರುಜುವಾತುಪಡಿಸುವ ಹೊಣೆಗಾರಿಕೆಗೆ ಒಳಪಟ್ಟು ಗುರುತಿಸಲಾಯಿತು. |
| 6 | ನಿಡಿ 6 | ಸಿಡಿ ಕಲಂ 65 ಬಿ ಅಡಿ ರುಜುವಾತುಪಡಿಸುವ ಹೊಣೆಗಾರಿಕೆಗೆ ಒಳಪಟ್ಟು ಗುರುತಿಸಲಾಯಿತು. |

**ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.